ಬಂದಿದ್ದಾನೆಂದು ಆ ದೇವರ ಪಟಕ್ಕೆ ನೂರು ಬಾರಿ ನಮಿಸುತ್ತಿದ್ದನಲ್ಲ! ಅವರಿಗೆ ನನ್ನ ಕಂದ ಇನ್ನು ಇಲ್ಲ ಎಂದು ಹೇಗೆ ಹೇಳಲಿ. ಅವರು ಮನೆಗೆ ಬರುವುದರೊಳಗೆ ನಾನು ಜೀವ ಬರಿಸದೇ ಹೋದರೆ ನನ್ನನ್ನು ಸುಮ್ಮನೇ ಬಿಟ್ಟಾರೆಯೇ? ನಾನೇ ಕೊಂದಿರುವೆನೆಂದು ನನ್ನನ್ನೂ ಕೊಲ್ಲದೇ ಇರರೇ? ಅಯ್ಯೋ... ಏನು ಮಾಡಲಿ? ಅದಾವ ಮಾಟಗಾತಿಯ ಬಂಜೆಗಣ್ಣು ನನ್ನ ಮಗುವಿಗೆ ತಗುಲಿತೋ? ಅಯ್ಯೋ... ಪಾಪಿ ನಾನು... ಇಂಥ ನೋವು ಪಡುವುದಕ್ಕಿಂತ ಮಗುವೇ ಹುಟ್ಟಲಿಲ್ಲವೆಂದಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತಲ್ಲಾ? ಆಗ ಮಗುವಾಗಲಿಲ್ಲವೆಂಬ ಒಂದೇ ಒಂದು ಚಿಂತೆ ಇರುತ್ತಿತ್ತು. ಈಗ? ಯಾವ ವೈರಿಗೂ ನನ್ನಂಥ ನೋವ ಕೊಡಬೇಡ ದೇವರೇ.

ನಾಟಿ ವೈದ್ಯ ಕೈಚೆಲ್ಲಿದ ಮೇಲೆ ಮಂತ್ರವಾದಿಯ ನೆನಪಾಯಿತು. ಕಂಕುಳಲ್ಲಿ ಕಂದನನ್ನು ಇರುಕಿಕೊಂಡರೆ ಎರಡೂ ಕಾಲಿನಿಂದ ಸೊಂಟವನ್ನು ಆತುಕೊಳ್ಳುತ್ತಿದ್ದ ಮಗು ಈಗ ನಿಷ್ಕ್ರಿಯವಾಗಿದೆ. ಎದೆಗೆ ಆತುಕೊಂಡು ಓಡಿದೆ. ಇದೀಗ ತಾನೇ ಕತ್ತು ನಿಂತಿದ್ದ ಮಗು, ಈಗ ಮತ್ತದೇ ಕತ್ತು ನಿಲ್ಲದ ಧಾಟಿಯಲ್ಲಿ ಅತ್ತ ಇತ್ತ ವಾಲಾಡುತ್ತಿತ್ತು. ಒಂದು ಕೈಯಲ್ಲಿ ಅದರ ಕುಂಡಿಯನ್ನೂ ಇನ್ನೊಂದು ಕೈಯಲ್ಲಿ ಕುತ್ತಿಗೆಯನ್ನೂ ಆತು ಹಿಡಿದುಕೊಂಡು ಓಡಿದೆ. ಓಡಿದ ರಭಸಕ್ಕೆ ನಾನೂ ಮಗುವೂ ಬೀಳುವಂತೆ ಮುಗ್ಗರಿಸುತ್ತಿದ್ದರೂ ಲೆಕ್ಕಿಸದೆ ಓಡುತ್ತಿದ್ದೆ. ನಾನು ಬೀಳುವುದಕ್ಕಿಂತ ಮುಖ್ಯವಾಗಿ ಅದರ ಜೀವವನ್ನು ಉಳಿಸಿಕೊಳ್ಳುವುದು ನನ್ನ ಧ್ಯೇಯವಾಗಿತ್ತು. ಮಂತ್ರವಾದಿಯು ನಡುಮನೆಯಲ್ಲಿ ತರತರಹದ ಚಿತ್ತಾರಗಳ ರಂಗೋಲಿಯ ಮಧ್ಯೆ ಪವಡಿಸಿದ್ದ. ನಾನು ನುಗ್ಗಿ ಹೋದ ಬಿರುಸಿಗೇ ಆತ ಹೇಳುತ್ತಿದ್ದ ಮಂತ್ರಗಳು ಮರೆತುಹೋದಂತೆ ಗಕ್ಕನೇ ನಿಲ್ಲಿಸಿ, ನನ್ನೆಡೆಗೆ ನೋಡಿದ. ನಾನು, 'ಮಂತ್ರವಾದಿಗಳೇ, ನಿಮ್ಮ ಕೃಪಾದೃಷ್ಟಿಯನ್ನು ಬೀರಿ ನನ್ನ ಮಗುವನ್ನು ಕಾಪಾಡೀ...' ಎಂದು ಅಂಗಲಾಚಿದೆ. ಆತನೂ ನಾಡಿಮಿಡಿತ ನೋಡಿದವನೇ ಗಾಬರಿಯಿಂದ ತುಂಬಿ ತುಳುಕಾಡುತ್ತಿದ್ದ ನನ್ನ ಕಣ್ಣುಗಳನ್ನು ನೋಡಿದ. ಕಣ್ಣಲ್ಲಿ ಕಣ್ಣಿಟ್ಟು ನೋಡಲಾರದೆ ಮುಖ ಕೆಳಗೆ ಬಿಟ್ಟ. ನನ್ನ ಅತ್ತೂ ಅತ್ತೂ ಕೆಂಪುಗಟ್ಟಿದ್ದ ಕಣ್ಣು, ಆ ಕಣ್ಣಿನ ಜೊತೆ ಪೈಪೋಟಿಯ ಮೇಲೆ ಉಸಿರುಗಟ್ಟುತ್ತ ನೀರು ಸುರಿಸುತ್ತಿದ್ದ ಮೂಗು, ಕೆದರಿದ್ದ ಮುಂಗೂದಲು ಎಲ್ಲವನ್ನೂ ಅವನಿಗೆ ನೋಡಲಾಗಿರಲಿಕ್ಕಿಲ್ಲ! ಆದರೂ ಆತನಿಗೆ ಮಗುವನ್ನು ಉಳಿಸಿಕೊಡುವುದಿರಲಿ, ಆ ಹಸುಗೂಸು ಸತ್ತಿದೆ ಎಂದು ಹೇಳಲೇ ಧೈರ್ಯ ಬರಲಿಲ್ಲ!

ನನ್ನ ಸಂಕಟವನ್ನು ತನ್ನ ಕಣ್ಣಿಂದ ನೋಡಲಾರದ ಆತ, ಯಾರಾದರೂ ಆತನೇ ಎಲ್ಲಿ ಸಾಯಿಸಿಬಿಟ್ಟಿದ್ದಾನೆ ಎಂದು ಭಾವಿಸಿ ಆಕ್ರಮಣ ಮಾಡಲು ಬಂದುಬಿಡುತ್ತಾರೇನೋ ಎನ್ನುವಂತೆ ನನ್ನನ್ನು ಸಾಗಹಾಕಲು ನೋಡಿದ. ನಾನು ಪಟ್ಟು ಬಿಡಲಿಲ್ಲ. ಅವನ ಎರಡೂ ಕೈಗಳನ್ನು ಹಿಡಿದು, 'ಇವು ನಿಮ್ಮ ಕೈಗಳಲ್ಲ, ಕಾಲು ಎಂದು ಭಾವಿಸಿದ್ದೇನೆ' ಎಂದು ಬಿಡಿಸಿಕೊಳ್ಳಲಾರದಷ್ಟು ಬಿಗಿಯಾಗಿ ಹಿಡಿದುಕೊಂಡೆ. ಆತನೂ 'ಕ್ಷಮಿಸಿಬಿಡು ತಾಯೀ...' ಎಂದಾಗ ನನಗೆ ಮುಂದಿನ ದಾರಿಯೇ ಕಾಣಲಿಲ್ಲ. ನನ್ನ ಹೊಟ್ಟೆಯೊಳಗಿನ ಸಂಕಟ ಬೆಂಕಿಗಿಂತಲೂ ಭೀಕರವಾಗಿ ಸುಡುತ್ತಿತ್ತು. 'ಅಯ್ಯೋ ದುರ್ವಿಧಿಯೇ! ಯಾವ ತಾಯಿಗೂ ತನ್ನ ಕಣ್ಣೆದುರೇ ಕರುಳ ಕುಡಿಗಳು ಸಾಯುವಂಥ ಶಿಕ್ಷೆ ನೀಡಬೇಡ. ಅದನ್ನು ಸಹಿಸಿಕೊಳ್ಳುವ ಶಕ್ತಿ ಹೆತ್ತವರಿಗಿರುವುದಿಲ್ಲವೆಂಬ ಕನಿಷ್ಠ ಅರಿವೂ ನಿನಗಿಲ್ಲವೇ?' ಎಂದು ಹಲುಬುತ್ತಿದ್ದೆ.

ಆಗ ಅದೇ ಮಂತ್ರವಾದಿ ಹೇಳಿದ: 'ನೋಡು, ಕಪಿಲವಸ್ತುವಿನ ರಾಜಕುಮಾರ ಸಿದ್ಧಾರ್ಥ ಗೌತಮ ಹಿಮಾಲಯದಲ್ಲಿ ತಪಸ್ಸು ಮಾಡಿ ಅಪಾರವಾದ ಸಿದ್ಧಿಯನ್ನು ಸಾಧಿಸಿ ಬಂದಿರುವನಂತೆ. ನಿನ್ನ ಅದೃಷ್ಟವೇ ಇರಬೇಕು, ಆತ ನಿನ್ನೆ ತಾನೇ ಇಲ್ಲಿಗೆ ಬಂದಿದ್ದು ಶ್ರಾವಸ್ತಿಯ ಅರಮನೆಯಲ್ಲಿ ತಂಗಿದ್ದನಂತೆ. ಇವತ್ತು ನಾಗರಿಕರಿಗೆಲ್ಲ ದರ್ಶನ, ಆಶೀರ್ವಚನ ನೀಡುತ್ತಿದ್ದಾನಂತೆ, ಹೋಗಿ ನೋಡು' ಎಂದ.

ಸಿದ್ಧಾರ್ಥ ಗೌತಮ! ಆತನ ಬಗ್ಗೆ ಅಪಾರವಾಗಿ ಕೇಳಿ ತಿಳಿದಿದ್ದೆ. ಅಪರಿಮಿತವಾದ ಹೆಂಗರುಳಿನ ಮನಸ್ಸು. ರಾಜಕುಮಾರನಿದ್ದಾಗಲೂ ಒಬ್ಬರ ಮನಸ್ಸನ್ನೂ ನೋಯಿಸಿದವನಲ್ಲ. ರೋಹಿಣಿ ನದಿ ನೀರಿನ ಹಂಚಿಕೆಯ ವಿಷಯದಲ್ಲಿ ಶಾಕ್ಯರು ಕೋಲಿಯರ ನಡುವೆ ಕತ್ತಿಗಳು ಝಳಪಿಸಿದಾಗಲೂ ಯುದ್ಧಗಳು ನಡೆಯಲು ಬಿಡದಂಥ ಅಂತಃಕರುಣಿ, ದಯಾಮಯಿ. 'ಯುದ್ಧ ಮಾಡುವುದೇ ಆದಲ್ಲಿ, ಅಂಥ ಜಾಗದಲ್ಲಿ ನಾನು ನಿಲ್ಲುವವನಲ್ಲ. ನಾನು ತೆರಳಿದ ನಂತರ ನೀವು ಏನಾದರೂ ಮಾಡಿಕೊಳ್ಳಿ' ಎಂದು ರಾಜವೈಭೋಗವನ್ನೇ ತೊರೆದು ಹೋದವನು. ಅಂಥವನು ನನ್ನ ಮಗನ ಜೀವ ಉಳಿಸಿಕೊಡಲಾರನೇ? ಎಲ್ಲಾ ಮಾರ್ಗಗಳು ಮುಚ್ಚಿಹೋದ ಮೇಲೆ ಅದೇ ಸರಿಯಾದ ಮಾರ್ಗ ಎಂದು ಬಾಚಿ ಮಗುವನ್ನು ಎದೆಗೊತ್ತಿ ಅವನತ್ತ ದೌಡಾಯಿಸಿದೆ.

ನನ್ನ ಅದೃಷ್ಟವೋ, ನನ್ನ ಹಸುಗೂಸಿನ ಸೌಭಾಗ್ಯವೋ, ಆತನೇ ನನ್ನೆಡೆಗೆ ಬರುತ್ತಿರುವಂತೆ ದಾರಿಯಲ್ಲೇ ಬರುತ್ತಿದ್ದ. ಜತೆಯಲ್ಲಿ ಹತ್ತಾರು ಜನ ಕಾಸಾವಿ ಬಟ್ಟೆ ತೊಟ್ಟಿದ್ದ ಭಿಕ್ಕುಗಳು. ಎಲ್ಲರ ಕೈಯಲ್ಲೂ ಅವತ್ತವತ್ತಿನ ಹಸಿವ ಇಂಗಿಸುವ ಬೋಗುಣಿಗಳು. ಬೋರಾಡಿಕೊಂಡು ಓಡಿದ ನನ್ನ ಬಿರುಸಿಗೆ ಸೀರೆ ತನ್ನ ಗಂಟನ್ನು ಬಿಚ್ಚಿಕೊಂಡು ಕಾಲಿಗೆ ತೊಡರುತ್ತಿತ್ತು. ಅದನ್ನು ಎತ್ತಿ ಎತ್ತಿ ಹೇಗೆ ಬೇಕೋ ಹಾಗೆ ಸೊಂಟಕ್ಕೆ ಸಿಕ್ಕಿಸಿಕೊಳ್ಳುತ್ತಾ ಎದ್ದುಬಿದ್ದು ಓಡುತ್ತಿದ್ದವಳು ನನ್ನ ಹಸುಗಂದನನ್ನು ಬುದ್ಧನಾಗಿದ್ದ ಸಿದ್ಧಾರ್ಥನ ಕಾಲ ಮೇಲೆ ಮಲಗಿಸಿಬಿಟ್ಟೆ. ನೀವೇ ಕಾಪಾಡಬೇಕು ಎಂದು ಅಡ್ಡಬಿದ್ದೆ.

'ಏನಾಯಿತು ಮಹಾತಾಯಿ?' ಎಂದನಾತ. ಆ ಮಹಾತಾಯಿ ಎಂಬ ಮಾತು ಕೇಳಿಯೇ ನನ್ನ ಕರುಳಿನ ಧಗೆಯ ತೀವ್ರತೆಗೆ ಶಾಂತಿಯ ಸಿಂಚನವಾದಂತಾಯಿತು. ಬೆಳಗಿನಿಂದ ಅನುಭವಿಸಿದ್ದ ಯಾತನೆಗೆ ಯಾವುದೋ ಲೇಹ್ಯವನ್ನು ಲೇಪಿಸಿದಂತಾಯಿತು. ಪಕ್ಕದಲ್ಲಿಯೇ ಇದ್ದ ಮನೆಯೊಂದರ ಜಗುಲಿಯ ಮೇಲೆ ಕರೆದೊಯ್ದು ಕೂರಿಸಿದ. ತಂದೆಯೊಬ್ಬನು ತನ್ನ ಮಗಳೊಬ್ಬಳನ್ನು ಸಾಂತ್ವನಪಡಿಸುವಂತೆ ಆತ ನನ್ನ ಎರಡೂ ಭುಜ ಹಿಡಿದು ಕುಳ್ಳಿರಿಸಿದ ಪರಿಗೇ ಬೆಳಗ್ಗಿನಿಂದ ಓಡಿ ಬಂದಿದ್ದ ನನ್ನ ಆಯಾಸವೆಲ್ಲ ಶಮನವಾದಂತಾಯಿತು. ಆದರೂ ನನ್ನ ದುಗುಡ ಕಡಿಮೆಯಾಗಿರಲಿಲ್ಲ.

ನಾನು, 'ಪ್ರಜಾಪಾಲಕ ನೀನು. ಏನೂ ಅರಿಯದ ನನ್ನ ಕಂದ ಉಸಿರು ನಿಲ್ಲಿಸಿದೆ. ಇರುವುದೊಂದೇ ಉಸಿರು. ಅದನ್ನು ಮರಳಿಸಿಕೊಡು ತಂದೆ. ನಿನಗೆ ಸಮಸ್ತ ಜನರ ದುಃಖ ಪರಿಹಾರದ ಜ್ಞಾನೋದಯವಾಗಿದೆಯೆಂದು ಕೇಳಿ ಬಲ್ಲೆ. ದುಡಿದು ಅನ್ನ ತರಲು ಹೋಗಿರುವ ನನ್ನ ಗಂಡ ಬರುವ ಮೊದಲು ನನ್ನ ಕಂದಮ್ಮನನ್ನು ಬದುಕಿಸಿಕೊಡು ಪ್ರಭುವೆ' ಎಂದು ಪರಿಪರಿಯಾಗಿ ಸೆರಗೊಡ್ಡಿ ಬೇಡಿದೆ.

ಬುದ್ಧರು ಪ್ರಸನ್ನರಾಗಿ, 'ಅಷ್ಟೇ ತಾನೇ? ನಾನು ಬದುಕಿಸಿ ಕೊಡುತ್ತೇನೆ' ಎಂದಾಗ ನನ್ನ ಮುಖದಲ್ಲಿ ಸಾವಿರ ಸಂತಸದ ರೇಖೆಗಳು ಮೂಡಿದವು. 'ನಿಜವೇ?' ಎಂದೆ.

'ಸಂಶಯವೇಕೆ? ನಾನು ಇಲ್ಲೇ ಇದ್ದು ನಿನ್ನ ಮಗನ ರಕ್ಷಣೆ ನೋಡಿಕೊಂಡಿರುತ್ತೇನೆ. ನೀನು ಹೋಗಿ ಒಂದು ಹಿಡಿ ಸಾಸಿವೆ ಕಾಳನ್ನು ತೆಗೆದುಕೊಂಡು ಬಾ...' ಎಂದರು. 'ನನ್ನ ಮನೆ ದೂರವಿದೆ. ಇಲ್ಲೇ ಯಾರದಾದರೂ ಮನೆಯಿಂದ ತಂದರೆ ಆದೀತೇ?' ಎಂದೆ.

'ಯಾರ ಮನೆಯಿಂದ ತಂದರೂ ಆದೀತು. ಆದರೆ ಆ ಮನೆಯಲ್ಲಿ ಈವರೆಗೆ ಯಾವುದೇ ಸಾವು ಸಂಭವಿಸಿರಬಾರದು, ಅಷ್ಟೇ...' ಎಂದರು ಮೆಲ್ಲಗೆ.

'ಅಷ್ಟೇ ತಾನೇ... ಈಗ ತರುತ್ತೇನೆ. ಅಲ್ಲಿಯವರೆಗೆ ದಯವಿಟ್ಟು ನನ್ನ ಮಗುವನ್ನು ಜೋಪಾನ ನೋಡಿಕೊಳ್ಳಿರಿ...' ಎಂದು ಹೊರಟೆ. ಅಷ್ಟರಲ್ಲಿ, 'ತಡೆ ತಾಯಿ. ಸಾಸಿವೆಯನ್ನು ಹೇಗೆ ತರುತ್ತೀಯಾ? ಹಿಡಿ ಈ ಬೋಗುಣಿಯನ್ನು. ಇದರಲ್ಲಿ ಹಾಕಿಸಿಕೊಂಡು ಬಾ. ಇದೇ ಇಷ್ಟು ದಿನ ನನ್ನ ಜೀವವನ್ನು ಪೊರೆದಿರುವ ಅಮೃತ ಕಳಸ...' ಎಂದು ತಮ್ಮ ಭಿಕ್ಷಾಪಾತ್ರೆಯನ್ನೇ ನೀಡಿದರು.

'ಆಗಲಿ. ಈಗಲೇ ತಂದುಬಿಡುತ್ತೇನೆ. ನನ್ನ ಮಗನಿಗೆ ಏನೂ ಆಗದಂತೆ ನೋಡಿಕೊಂಡಿರಿ' ಎಂದು ಓಡಿದೆ. ಸತ್ತ ಮಗುವನ್ನು ಅಗಲಿ ಹೊರಟದ್ದು ಆಗಲೇ... ಪಕ್ಕದ ಮನೆಯ ಜಗುಲಿಯಲ್ಲಿ ಕುಳಿತಿದ್ದ ಮುತ್ತೈದೆಯನ್ನು ಅವಸರದಿಂದ ಕೇಳಿದೆ: 'ಒಂದು ಹಿಡಿ ಸಾಸಿವೆಯನ್ನು ಕೊಡುವಿರಾ?'. ಆಕೆ ಪುಣ್ಯಾತ್ಮಗಿತ್ತಿ, 'ಅವಶ್ಯವಾಗಿ' ಎಂದು ಹೇಳಿ ಒಳಗೆ ಹೋಗಿ ಬಂದು ಹಿಡಿಯೇನು, ಬೊಗಸೆಯಲ್ಲೇ ಹಿಡಿದು ತಂದಳು. 'ಆದರೆ, ಈ ಹಿಂದೆ ನಿಮ್ಮ ಮನೆಯಲ್ಲಿ ಯಾರೂ ಸತ್ತಿಲ್ಲ ತಾನೇ?' ಎಂದೆ ಮೆಲ್ಲಗೆ.

'ಅಯ್ಯೋ, ಕಳೆದ ತಿಂಗಳಷ್ಟೇ ಮನೆಗೆ ದುಡಿದು ಹಾಕುತ್ತಿದ್ದ ನನ್ನ ಗಂಡ ನನ್ನನ್ನು ಅನಾಥಳನ್ನಾಗಿ ಮಾಡಿ ಹೋಗಿಬಿಟ್ಟರು' ಎಂದವಳು, ಮತ್ತೆ 'ಯಾಕೆ?' ಎಂದಳು. ಬುದ್ಧರು 'ಸಾವು ಇರದ ಮನೆಯಿಂದ ಸಾಸಿವೆ ತರಲು ಹೇಳಿದ್ದಾರೆ' ಎಂದೆ.